ಸಾಕ್ಷಿ ಪುರಾವೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಸಮಾಪನೆ ಮಾಡಿರುವುದನ್ನು ತೀವ್ರವಾಗಿ ಆಕ್ಷೇಪಿಸಿ ಸಮಾಪನಾ ಆದೇಶ ಹಾಗೂ ಅಫೀಲು ಆದೇಶಗಳನ್ನು ರದ್ದುಪಡಿಸಿ 3 ತಿಂಗಳೊಳಗಾಗಿ ಅರ್ಜಿದಾರರಿಂದ ಲಿಖಿತ ಹಾಗೂ ಮೌಖಿಕ ಅಹವಾಲುಗಳನ್ನು ಸ್ವೀಕರಿಸಿ. ಅಗತ್ಯವಿದ್ದಲ್ಲಿ ದಿನನಿತ್ಯ ಮತ್ತು ಔ ಟ್ ಆಪ್ ಟರ್ನ್ ವಿಚಾರಣೆ ನಡೆಸಿ ಸಂಘದ ಸಮಾಪನಾ ಪ್ರಕ್ರಿಯೆಯನ್ನು ಮುಕ್ತಾಯ ಮಾಡಲು ಆದೇಶಿಸಿದ್ದು ವಿಚಾರಣೆ ನಡೆಸಿದ ನಂತರ ಸಂಘದ ಅಹವಾಲುಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 27 (3) ರನ್ವಯ ಆದೇಶ ಹೊರಡಿಸಿರುವುದರಿಂದ ಸಂಘವನ್ನು ಮುಂದುವರಿಸಲಾಗಿದೆ.

ಇ) ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಖಾಸಗಿಯಾಗಿ ಬಡಾವಣೆ ನಿರ್ಮಿಸಿ ಅವ್ಯವಹಾರ ನಡೆಸಿರುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರ ಕಲಂ65ರನ್ವಯ ನಡೆಸಿದ ವರದಿಯಿಂದ ಕಂಡು ಬಂದಿದ್ದು ಸಂಘವು ಬಡಾವಣೆ ನಿರ್ಮಿಸಲಿರುವ ಜಮೀನು ನ್ಯಾಯಾಲಯದಲ್ಲಿ ತಕರಾರಿನಲ್ಲಿರುವ ಕಾರಣ ಅಧ್ಯಕ್ಷರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪರಿಶೀಲನೆ ಕ್ರಮ ಜರುಗಿಸಲಾಗುವುದು.

ಈ) ಈ ಸಂಘವನ್ನು ಮುಂದುವರೆಸಿರುವುದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿಲ್ಲ. ಹುಲೆ ಈ ಸಂಘದ ಬಗ್ಗೆ ಇರುವ ದೂರುಗಳ ಬಗ್ಗೆ ಪರಿವೀಕ್ಷಣೆ ನಡೆಸಿದ್ದು ಸಂಘದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಸಮಾಪನೆ ಗೊಳಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ.

ಸಹಕಾರಿ ಸಂಘಗಳಿಗೆ ಚುನಾವಣೆ

4697 (5407) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ತಾಲ್ಲೂಕು ಮಟ್ಟದ ಎಷ್ಟು ಸಹಕಾರಿ ಸಂಘಗಳು ದಿನಾಂಕ:31.3.2003 ಅಂತ್ಯಕ್ಕೆ ಚುನಾವಣೆಯನ್ನು ನಡೆಸಬೇಕಾಗಿತ್ತು: ಎಷ್ಟು ಸಂಘಗಳ ಚುನಾವಣೆಯನ್ನು ಪೂರ್ಣಗೊಳಿಸಲಾಗಿದೆ?

ಆ) ಬೆಂಗಳೂರು ಜಿಲ್ಲೆಗಳಲ್ಲಿ ಎಷ್ಟು ಸಂಘಗಳು (ತಾಲ್ಲೂಕು ಮಟ್ಟ ಚುನಾವಣೆಯನ್ನು ನಡೆಸಿರುವುದಿಲ್ಲ: ಚುನಾವಣೆ ಎಷ್ಟು ವರ್ಷಗಳಿಂದ ಈ ಸಂಘಗಳಿಗೆ ನಡೆದಿರುವುದಿಲ್ಲ, ಚುನಾವಣೆಯನ್ನು ನಡೆಸಲು ಶಾಸನ ಬದ್ದವಾಗಿ ನಿಗಧಿಪಡಿಸಿರುವ ಅವಧಿ ಎಷ್ಟು: ಚುನಾವಣೆಯನ್ನು ನಡೆಸದಿರಲು ಕಾರಣವೇನು?

ಇ) ಚುನಾವಣೆಯನ್ನು ನಡೆಸಲು ಅಧಿಕಾರಿಗಳು ವಿಫಲವಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ದಿನಾಂಕ: 31.3.2003 ರ ಅಂತ್ಯಕ್ಕೆ 215 ತಾಲ್ಲೂಕು ಮಟ್ಟದ ಸಹಕಾರ ಸಂಘಗಳು ಚುನಾವಣೆ ನಡೆಸಬೇಕಾಗಿತ್ತು. ಈ ಪೈಕಿ 202 ಸಹಕಾರ ಸಂಘಗಳು ಚುನಾವಣೆಯನ್ನು ಪೂರ್ಣಗೊಳಿಸಿರುತ್ತದೆ.

ಆ) ಬೆಂಗಳೂರು ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದ ಮೂರು ಸಹಕಾರ ಸಂಘಗಳು ಚುನಾಣವಣೆಗಳನ್ನು ನಡೆಸಿರುವುದಿಲ್ಲ. ಅವುಗಳು:–

1. ಹತ್ತಿ ಮತ್ತು ರೇಷ್ಮೆ ಕೈಮಗ್ಗದ ಮಾರಾಟ ಸಹಕಾರ ಸಂಘ ನಿ, ಹಳೆ ಗುಡ್ಡದಹಳ್ಳಿ ಬೆಂಗಳೂರು – 26

2. ಆನೇಕಲ್ ತಾಲ್ಲೂಕು ಕೈಮಗ್ಗದ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ, ಆನೇಕಲ್

3. ಪ್ರಾತಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ರಾಮನಗರ.

ಈ ಸಂಘಗಳು ದಿನಾಂಕ:31.3.2003 ರೊಳಗೆ ಚುನಾವಣೆ ನಡೆಸಬೇಕಾಗಿದ್ದು, ಚುನಾವಣೆಗಳನ್ನು ನಡೆಸಿರುವುದಿಲ್ಲ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 28 ಎ (4) ರಂತೆ ಆಡಳಿತ ಮಂಡಳಿ ಪದಾವಧಿಯು 5 ಸಹಕಾರ ವರ್ಷಗಳಾಗಿದ್ದು, ಅವಧಿ ಮುಕ್ತಾಯದ ಮೊದಲು ಹದಿನೈದು ದಿನಗಳೊಳಗೆ ಚುನಾವಣೆ ನಡೆಸಬೇಕಾಗಿರುತ್ತದೆ. ಕ್ರಮಸಂಖ್ಯೆ (1): ಈ ಸಂಘದಲ್ಲಿ ಯಾವುದೇ ಚಟುವಟಿಕೆ ನಡೆಯದೇ ನಿಷ್ಕ್ರಿಯವಾಗಿರುವುದರಿಂದ ಕಲಂ 72 ರಡಿ ಸಮಾಪನೆಗೆ ಕ್ರಮವಹಿಸಲಾಗಿದೆ. ಕ್ರಮ ಸಂಖ್ಯೆ (2) ಈ ಸಂಘವು ನಿಗದಿತ ಅವಧಿಯೊಳಗೆ ಚುನಾವಣೆ ನಡೆಸಲು ವಿಫಲವಾಗಿರುವುದರಿಂದ ಕಲಂ 28ಎ (5) ರಡಿ ಆಡಳಿತಗಾರರನ್ನು ನೇಮಕ ಮಾಡಿದೆ. ಕ್ರಮಸಂಖ್ಯೆ (3) : ರ ಸಂಘದ ಆಡಳಿತ ಮಂಡಳಿಯನ್ನು ದಿನಾಂಕ: 31/3/2003 ರ ಪೂರ್ವದಲ್ಲಿ ಕಲಂ 30 (1) ರಡಿಯಲ್ಲಿ ರದ್ದತಿಗೊಳಿಸಲಾಗಿದೆ.

ಇ) ಇಂತಹ ಪ್ರಕರಣಗಳು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ನಷ್ಟಕ್ಕೆ ಪರಿಹಾರ

...4700 (5433) : ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳ ಬರಗಾಲದಿಂದ ತೋಟಗಾರಿಕೆ ಬೆಳೆಗಳಿಗೆ ಎಷ್ಟು ನಷ್ಟ ಉಂಟಾಗಿದೆ? (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಆ) ತೋಟಗಾರಿಕೆ ಬೆಳೆಗಳ ನಷ್ಟಕ್ಕೆ ಪರಿಹಾರ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಇ) ಇದ್ದಲ್ಲಿ ಯಾವಾಗ ಜಾರಿಗೆ ತರಲಾಗುವುದು? (ವಿವರಗಳನ್ನು ಕೊಡುವುದು)

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಪ್ರಾಥಮಿಕ ಅಂದಾಜಿನ ಪ್ರಕಾರ 45000 ಹೆಕ್ಟೇರ್ ಪ್ರದೇಶದಲ್ಲಿನ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳು ಒಣಗಿರುತ್ತವೆ ಮತ್ತು 5.74 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿನ ಫಸಲು ನಷ್ಟವಾಗಿರುತ್ತದೆ. ಇದರಲ್ಲಿ ಗಿಡಗಳು ಒಣಗಿರುವುದು, ಬೆಳೆ ನಾಶ ಮತ್ತು ಬಿತ್ತನೆ ಆಗದೇ ಇರುವುದರಿಂದಾದ ನಷ್ಟದ ಅಂದಾಜು ಸೇರ್ಪಡೆಯಾಗಿದೆ. ಇದರಿಂದ ಆದ ಒಟ್ಟು ನಷ್ಟ ರೂ. 3506 ಕೋಟಿ ಎಂದು ಅಂದಾಜು ಮಾಡಲಾಗಿದೆ. ಬಹು ವಾರ್ಷಿಕ ತೋಟಗಾರಿಕೆ ಬೆಳೆಗಳು ಒಣಗಿರುವುದರಿಂದ ರೂ. 1244 ಕೋಟಿ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ, ಜಿಲ್ಲಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರಮ ಸಂ	ಜಿಲ್ಲೆ	ಅಂದಾಜು ನಷ್ಟ (ರೂ. ಕೋಟಿಗಳಲ್ಲೀ)
1.	ಬೆಂಗಳೂರು ನಗರ	19.01
2.	ಬೆಂಗಳೂರು ಗ್ರಾಮಾಂತರ	13.38